ಓ.ಎಸ್. ನಂ.20/2018
ಪಿ. ಡಬ್ಲ್ಯೂ - 3

<u>ದಿನಾಂಕಃ **22-09-2025**</u>

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಾದ ಶ್ರೀ.ಎ.ಕೆ.ಎಂ.ಎಸ್. ರವರಿಂದ

ಹಣಮಂತ ತಂದೆ ಹಣಮಯ್ಯ ಮನೆಮೊದ್ದು ರವರು ನನ್ನ ಅಣ್ಣನಾಗಬೇಕು. ಇವರು ದುಪ್ಪಲ್ಲಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. ನಾನು 5 ಮತ್ತು 6 ನೇ ತರಗತಿಯ ವರೇಗೆ ಓದಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ವಕೀಲರು ತಯಾರಿಸಿರುತ್ತಾರೆ ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಈ ಪ್ರಕರಣಕ್ಕೆ ಸಂಬಂದಪಟ್ಟ ಮಾಹಿತಿಯನ್ನು ಮಾರಯ್ಯ ಕೊಟ್ಟಿರುತ್ತಾನೆ. 1 ನೇ ವಾದಿಯ ವಯಸ್ಸು 60 ಇರುತ್ತದೆ ಉಳಿದ ವಾದಿಯರ ಹೆಸರು ಮತ್ತು ವಯಸ್ಸು ನನಗೆ ಗೊತ್ತಿರುವುದಿಲ್ಲ. ವಾದಿಯರು ಈ ದಾವೆಯನ್ನು ಶಿವಬಸ್ಸಮ್ಮ ರವರ ವಿರುದ್ಧ ಸಲ್ಲಿಸಿರುತ್ತಾರೆ. ವಾದಿಯರು ದುಪ್ಪಲ್ಲಿ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ವಾದಿಯರು ದುಪ್ಪಲ್ಲಿ ಗ್ರಾಮದಲ್ಲಿ ವಾಸ ಇಲ್ಲದಿದ್ದರು ನಾನು ಅವರು ದುಪ್ಪಲ್ಲಿ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿಯರಿಗೆ ಹಿರಿಯರಿಂದ ಬಂದ ಆಸ್ತಿಗಳು ಇರುತ್ತವೆ ಎಂದು ನಾನು ಹೇಳಿದ ಹಾಗೇ ನಾನು ದಾಖಲೆಯನ್ನು ನೋಡಿರುವುದಿಲ್ಲ.

1995 ರಕ್ಕಿಂತ ಪೂರ್ವದಲ್ಲಿ ಯಂಕಪ್ಪ ಮೃತಪಟ್ಟ ನಂತರ ಆತನ ಹೆಂಡತಿಯಾದ ಮಹಾದೇವಮ್ಮ ರವರು ದಾವಾದ 1 ನೇ ಆಸ್ತಿಯನ್ನು ತಮ್ಮ ಹೆಸರಿಗೆ ಮಾಡಿಕೊಂಡಿದ್ದರು ಎಂದರೆ ಸರಿ. ಯಂಕಪ್ಪ ಮೃತಪಟ್ಟ ನಂತರ ಹಣಮಂತ ಮೃತಪಟ್ಟಿದ್ದನ್ನು ಎಂದರೆ ಸರಿ. ಹಣಮಂತ ಮೃತಪಡುವಾಗ ದಾವಾದ 2 ನೇ ಆಸ್ತಿಯನ್ನು ಆತನ ಮಗಳಾದ ಹುಸೇನಮ್ಮ ರವರ ಹೆಸರಿನಲ್ಲಿ ದಾಖಲು ಮಾಡಿದ್ದನ್ನು ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಹುಸೇನಮ್ಮ ಹಣಮಂತ ಮಗಳು ಇರುವುದಿಲ್ಲ ಎಂದು ಹೇಳುತ್ತಾರೆ. ಹುಸೇನಮ್ಮ ಹಣಮಂತನ

ಮಗಳು ಇರುವುದಿಲ್ಲ ಹಾಗೂ ಅವಳು ದುಪ್ಪಲ್ಲಿ ಗ್ರಾಮದಲ್ಲಿ ವಾಸವಾಗಿರುವುದಿಲ್ಲ ಎಂದು ತೋರಿಸಲು ನಾನು ತಹಸೀಲ್ದಾರ ರವರ ಕಡೆಯಿಂದ ದಾಖಲೆಯನ್ನು ಪಡೆದು ಹಾಜರುಪಡಿಸಿರುವುದಿಲ್ಲ. ಯಂಕಪ್ಪನಿಗೆ ಯಲ್ಲಮ್ಮ ಎಂಬ ಹೆಂಡತಿ ಹಾಗೂ ಯಲ್ಲಪ್ಪ ಎಂಬ ಮಗ ಇರುತ್ತಾನೆ ಎಂದು ಹೇಳಿರುತ್ತೀರಿ ಹಾಗಾದರೆ ಯಲ್ಲಮ್ಮ ಮತ್ತು ಯಲ್ಲಪ್ಪ ಹೆಂಡತಿ ಮತ್ತು ಮಗ ಇರುತ್ತಾರೆ ಎಂದು ನಾನು ಪಹಣಿ ದಾಖಲೆಯನ್ನು ನೋಡಿರುತ್ತೇನೆ ಎಂದು ಹೇಳುತ್ತಾರೆ.

ಯಂಕಪ್ಪ ಮೃತಪಡುವಾಗ ನನಗೆ 15 ವಯಸ್ಸು ಇತ್ತು. ಹಣಮಂತ ಮೃತಪಡುವಾಗ ನನಗೆ 25 ವಯಸ್ಸು ಇತ್ತು. ವಾದಿಯರು ಯಂಕಪ್ಪ ತಂದೆ ಸಾಬಣ್ಣ ಬಾಗ್ಲಿ ಹಾಗೂ ಹಣಮಂತ ತಂದೆ ಸಾಬಣ್ಣ ಬಾಗ್ಲಿ ರವರ ಕುಟುಂಬಕ್ಕೆ ಸಂಬಂದ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ವಾದಿಯರು ದಾವಾದ ಆಸ್ತಿಗಳಿಗೆ ಯಾವುದೇ ರೀತಿಯ ಸಂಬಂದವನ್ನು ಹೊಂದಿರುವುದಿಲ್ಲ ಎಂದರೆ ಸರಿಯ್ಲು. ಯಂಕಪ್ಪ ತಂದೆ ಸಾಬಣ್ಣ ಬಾಗ್ಲಿ ರವರಿಗೆ ಯಲಮ್ಮ ಎಂಬ ಹೆಂಡತಿ ಹಾಗೂ ಯಲ್ಲಪ್ಪ ಎಂಬ ಮಗ ಇರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾದ ಆಸ್ತಿಗಳನ್ನು ರೂ10,000/-ರೂಪಾಯಿಗಳಿಗೆ 20 ವರ್ಷಗಳ ಕಾಲ ಸಾಗುವಳಿ ಮಾಡಲು ಯಲ್ಲಪ್ಪನು ಕೊಟ್ಟಿದ್ದನ್ನು ಎಂದು ಬರೆಸಿರುತ್ತೀರಿ ಎಂದರೆ ಸಾಕ್ಷಿಯು ನಾನು ಬರೆಸಿರುವುದಿಲ್ಲ ಎಂದು ಹೇಳುತ್ತಾರೆ. ವಾದಿಯರು ದುಪ್ಪಲ್ಲಿ ಗ್ರಾಮಕ್ಕೆ ಆಗಾಗ ಬರುತ್ತಿದ್ದರು ಎಂದು ಬರೆಸಿರುತ್ತೀರಿ ಆದರೆ ಅವರ ಮನೆ ದುಪ್ಪಲ್ಲಿ ಗ್ರಾಮದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದುಪ್ಪಲ್ಲಿ ಗ್ರಾವುದಲ್ಲಿ ಇದೇ ಎಂದು ತೋರಿಸಲು ವಾದಿಯರ ಮನೆ ನಂಬರ ನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸಾಕ್ಷ್ಯಯು ಮನೆ ನಂಬರನ್ನು ಬರೆಸಿರುವುದಿಲ್ಲ ಏಕೆಂದರೆ ಆವಾಗ ಮನೆ ನಂಬರ ಇರಲಿಲ್ಲ ಎಂದು ಹೇಳುತ್ತಾರೆ. ನನ್ನ ಮನೆಗೆ ಪಂಚಾಯತಿ ನಂಬರ ಇರುತ್ತದೆ. ವಾದಿಯರು ನನಗೆ ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಬೇಕು ಎಂದು ಹೇಳಿ ಮೂರು ತಿಂಗಳ ಹಿಂದೆ ಭೇಟಿಯಾಗಿದ್ದರು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ ಪ್ರತಿವಾದಿಯರ ಆಸ್ತಿಯನ್ನು ಎತ್ತಿ ಹಾಕುವ ಸಲುವಾಗಿ ವಾದಿಯರಿಗೆ ಸಹಾಯ ಮಾಡಲು ನಾನು ಸುಳ್ಳು ಪ್ರಮಾಣ ಪತ್ರದಲ್ಲಿ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ